2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 29/2023

| | | |
|---|---|---|
| ಸಾಕ್ಷಿದಾರರ ಹೆಸರು | - ವಿಜಯ್ ಕುಮಾರ್ | ಪಿಡಬ್ಲೂ -1 |
| ತಂದೆಯ ಹೆಸರು | - ರಮೇಶ್ | ಸಿಡಬ್ಲೂ -1 |
| ವಯಸ್ಸು | - 29 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ದುರ್ಗಾಪರಮೇಶ್ವರಿ ಎಸ್ಟೇಟ್, ಬಾರೆಕೆರೆ, ಮೂಡಿಗೆರೆ | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ jitsi app ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 14.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಯಶೋದ ನನ್ನ ತಾಯಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು. ಆತ ನನ್ನ ತಾಯಿಯ ಎರಡನೇ ಗಂಡ. ಚಾಸಾ.2 ಮತ್ತು ಚಾಸಾ.3 ನನ್ನ ದೂರದ ಸಂಬಂಧಿಕರು. ಚಾಸಾ.4, ಚಾಸಾ.5, ಚಾಸಾ.6 ರವರು ಗೊತ್ತು. ಚಾಸಾ.9 ನನ್ನ ದೊಡ್ಡಮ್ಮನ ಮಗ. ಚಾಸಾ.10 ಗೊತ್ತು, ಆತ ನನ್ನ ಚಿಕ್ಕಮ್ಮನ ಮಗ. ಚಾಸಾ.13 ಗೊತ್ತು, ಆತ ಆರೋಪಿ ಮತ್ತು ನನ್ನ

ತಾಯಿಯ ಮಗ. ಚಾಸಾ.14 ನನ್ನ ಚಿಕ್ಕಮ್ಮ. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ನನ್ನ ತಂದೆಯ ಹೆಸರು ರಮೇಶ. ನಾನು ಹುಟ್ಟಿದ ಒಂದು ವರ್ಷಕ್ಕೆ ನನ್ನ ತಂದೆ ಮೃತಪಟ್ಟಿರುತ್ತಾರೆ. ನನಗೆ 20 ವರ್ಷ ವಯಸ್ಸಾಗುವವರೆಗೂ ನಾನು ಮತ್ತು ನನ್ನ ತಾಯಿ ಹಾಂದಿಗ್ರಾಮದ ಬಾರೆಕೆರೆಯಲ್ಲಿರುವ ದುರ್ಗಾಪರಮೇಶ್ವರಿ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದೆವು ಮತ್ತು ಸದರಿ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದೆವು. ನನ್ನ ತಾಯಿ ಮೃತಪಡುವ 10 ವರ್ಷಗಳ ಹಿಂದೆ ಆರೋಪಿಯನ್ನು ಮದುವೆ ಮಾಡಿಕೊಂಡಿದ್ದಳು. ನಂತರ ನನ್ನ ತಾಯಿ ಹೊನ್ನಗುಂಡಿಯಲ್ಲಿರುವ ಆರೋಪಿಯ ಮನೆಗೆ ಹೋಗಿ ಅಲ್ಲಿಯೇ ವಾಸವಾಗಿದ್ದಳು. ನಾನು ಬಾರೆಕೆರೆಯ ಎಸ್ಟೇಟಿನಲ್ಲಿಯೇ ಇದ್ದೆನು. ಆರೋಪಿ ಮತ್ತು ನನ್ನ ತಾಯಿಗೆ ಚಾಸಾ.13 ಧನುಷ್ ಎಂಬ ಮಗನಿದ್ದಾನೆ. ನನ್ನ ತಾಯಿ ಮೃತಪಡುವ ಸಮಯಕ್ಕೆ ಆತನಿಗೆ ಅಂದಾಜು 10 ವರ್ಷ ವಯಸ್ಸಾಗಿತ್ತು.

3. ಹೊನ್ನಗುಂಡಿಯಲ್ಲಿರುವ ಆರೋಪಿಯ ಅಕ್ಕಪಕ್ಕದ ಮನೆಯವರಿಂದ ನಾನು ನನ್ನ ತಾಯಿಯ ಬಗ್ಗೆ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದೆನು. ದಿನಾಂಕ 15.11.2022 ರಂದು ನಾನು ಬಾರೆಕೆರೆಯ ಎಸ್ಟೇಟಿನಲ್ಲಿ ಇದ್ದೆನು. ಮಾರನೇ ದಿನ ಬೆಳಿಗ್ಗೆ 10.00 ಗಂಟೆಗೆ ಚಾಸಾ.9 ಸತೀಶರವರು ನನಗೆ ಫೋನ್ ಮಾಡಿ ನನ್ನ ತಾಯಿ ಮೃತಪಟ್ಟಿರುವುದಾಗಿ ತಿಳಿಸಿದನು. ನಂತರ ನಾನು ಬಾರೆಕೆರೆಯಿಂದ ಹೊರಟು ಹೊನ್ನಗುಂಡಿಯಲ್ಲಿರುವ

ಆರೋಪಿಯ ಮನೆಗೆ ಹೋದೆನು. ಸದರಿ ಮನೆಯಲ್ಲಿ ಎರಡು ಕೋಣೆಗಳಿದ್ದವು. ಮೊದಲನೇ ಕೋಣೆಯಲ್ಲಿ ಚಾಪೆಯ ಮೇಲೆ ನನ್ನ ತಾಯಿಯ ಶವವನ್ನು ಮಲಗಿಸಲಾಗಿತ್ತು. ನಾನು ನೋಡಿದಾಗ ಆಕೆಯ ಮೂಗಿನ ಮೇಲೆ ರಕ್ತ ಬಂದು ಹೆಪ್ಪುಗಟ್ಟಿತ್ತು, ಆಕೆಯ ಕಣ್ಣುಗಳು ಕಪ್ಪಾಗಿ ಊದಿಕೊಂಡಿದ್ದವು, ಆಕೆಯ ಕುತ್ತಿಗೆ ಕಪ್ಪಾಗಿ ಊದಿಕೊಂಡಿತ್ತು. ಅಲ್ಲಿ ಚಾಸಾ.13 ಧನುಷ್ ಇದ್ದನು ಮತ್ತು ಅಕ್ಕಪಕ್ಕದ ಜನರು ಸೇರಿದ್ದರು. ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿದಾಗ ಆರೋಪಿ ಕುಡಿದುಬಂದು ನನ್ನ ತಾಯಿಯ ಮೇಲೆ ಜಗಳ ಮಾಡುತ್ತಿದ್ದಾಗಿ ತಿಳಿಸಿದರು. ಆಗ ನಾನು ಚಾಸಾ.13 ಧನುಷನನ್ನು ವಿಚಾರಿಸಿದಾಗ ಹಿಂದಿನ ದಿನ ರಾತ್ರಿ ಆತ ನನ್ನ ತಾಯಿಗೆ ಬಿ ಪಿ ಮಾತ್ರೆಯನ್ನು ಕೊಟ್ಟಿದ್ದಾಗಿ ನಂತರ ಮೂರು ಜನ ಅಂದರೆ ನನ್ನ ತಾಯಿ, ಆರೋಪಿ ಮತ್ತು ಆತ ಊಟ ಮಾಡಿ ಮಲಗಿದ್ದಾಗಿ ತಿಳಿಸಿದನು. ಬೆಳಿಗ್ಗೆ ಆತ ನನ್ನ ತಾಯಿಯನ್ನು ಎಬ್ಬಿಸಿ ನೋಡಿದಾಗ ಆಕೆ ತೀರಿಕೊಂಡಿದ್ದಾಗಿ ಚಾಸಾ.13 ನನಗೆ ತಿಳಿಸಿದನು.

4. ನಂತರ ನಾನು ಜಯಪುರ ಪೊಲೀಸ್ ಠಾಣೆಗೆ ಹೋಗಿ ಆರೋಪಿ ನನ್ನ ತಾಯಿಯನ್ನು ಕೊಲೆ ಮಾಡಿದ್ದಾನೆಂದು ಆತನ ವಿರುದ್ಧ ದೂರು ಕೊಟ್ಟೆನು. ನನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುವುದಿಲ್ಲ ಹಾಗಾಗಿ ದೂರನ್ನು ಚಾಸಾ.2 ರವಿರವರು ನಾನು ಹೇಳಿದ ಮೇರೆಗೆ ಬರೆದುಕೊಟ್ಟಿದ್ದಾರೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ

ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

6. ಪೊಲೀಸರು ಆರೋಪಿಯ ಮನೆಯ ಹತ್ತಿರ ತನಿಖೆಗಾಗಿ ಬಂದಿದ್ದರು. ನಂತರ ನಾನು ಅಲ್ಲಿಗೆ ಹೋದೆನು. ಸಾಕ್ಷಿಗೆ ಮೂರು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ನನ್ನ ತಾಯಿ ಯಶೋಧಾಳ ಶವ ಕಂಡು ಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.3 ರಿಂದ ನಿಪಿ.5 ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಆರೋಪಿಯ ಮನೆ ಕಂಡುಬರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.6 ಎಂದು ಗುರುತಿಸಲಾಯಿತು. ನಿಪಿ.5 ಮತ್ತು ನಿಪಿ.6 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನಿಪಿ.5 ಫೋಟೋದಲ್ಲಿ ಮೇಲೆ ಹೇಳಿದಂತೆ ಆರೋಪಿಯ ಮನೆಯ ಒಳಗಡೆ ಚಾಪೆಯ ಮೇಲೆ ನನ್ನ ತಾಯಿಯನ್ನು ಮಲಗಿಸಿರುವುದು ಕಂಡು ಬರುತ್ತದೆ.

8. ದೂರು ನೀಡಿದ ಬಳಿಕ ನಾನು ಚಾಸಾ.13 ರವರನ್ನು ಘಟನೆಯ ಬಗ್ಗೆ ಪುನಃ ವಿಚಾರಿಸಿದೆನು. ಆಗ ಚಾಸಾ.13 ರವರು ಆರೋಪಿ ಕುಡಿದುಬಂದು ನನ್ನ ತಾಯಿ ಯಶೋಧಾಳಿಗೆ ಹೊಡೆಯುತ್ತಿದ್ದಾಗಿ ನನಗೆ ತಿಳಿಸಿದನು. ನನ್ನ

ತಾಯಿ ಮೃತಪಟ್ಟ ದಿನ ಆರೋಪಿ ಕುಡಿದು ಬಂದು ಕೋಲಿನಿಂದ ಆಕೆಗೆ ಹೊಡೆದಿದ್ದಾಗಿ ಮತ್ತು ನನ್ನ ತಾಯಿಯ ಕುತ್ತಿಗೆಯನ್ನು ಹಿಸುಕಿದ್ದಾಗಿ ಚಾಸಾ.13 ಧನುಷ್ ನನಗೆ ತಿಳಿಸಿದನು.

9. ನಾನು ನನ್ನ ತಾಯಿಯ ಶವವನ್ನು ನೋಡಲು ಹೋದಾಗ ಆರೋಪಿ ತನ್ನ ಮನೆಯಲ್ಲಿಯೇ ಇದ್ದನು. ದೂರು ಕೊಟ್ಟ ಬಳಿಕ ಪೊಲೀಸರು ಆತನನ್ನು ಬಂಧಿಸಿದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

10. ದಿನಾಂಕ 16.11.2022 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ.9 ಸತೀಶ್ ರವರು ನಿಮಗೆ ಫೋನ್ ಮಾಡಿ ನಿಮ್ಮ ತಾಯಿ ಮೃತಪಟ್ಟಿರುವ ವಿಚಾರವನ್ನು ತಿಳಿಸಿದ್ದಾರೆ ಎಂದರೆ ಸರಿ. ನಂತರ ಅದೇ ದಿನ ಅಂದರೆ ದಿನಾಂಕ 16.11.2022 ರಂದು ನೀವು ಆರೋಪಿಯ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿದ್ದೀರಿ ಎಂದರೆ ಸರಿ. ದಿನಾಂಕ 17.11.2022 ರಂದು ಪೊಲೀಸರು ಮರು ವಿಚಾರಣೆಗಾಗಿ ನಿಮ್ಮನ್ನು ಠಾಣೆಗೆ ಕಳುಹಿಸಿದ್ದರು ಎಂದರೆ ಸರಿ.

11. ದಿನಾಂಕ 15.11.2022 ರಂದು ಚಾಸಾ.13 ರವರು ಶಾಲೆಯಿಂದ ಮನೆಗೆ ಬಂದಾಗ ನನ್ನ ತಾಯಿ ಯಶೋಧಾ ಸುಸ್ತಾಗಿ ಮಲಗಿಕೊಂಡಿದ್ದಾಗಿ, ಆಕೆಯ ಮೂಗು ಮತ್ತು

ಹಣೆಯಲ್ಲಿ ಗಾಯವಾಗಿ ಕಣ್ಣು ಊದಿಕೊಂಡಿದ್ದಾಗಿ, ಆ ಬಗ್ಗೆ ಆತ ನನ್ನ ತಾಯಿಯನ್ನು ಕೇಳಿದಾಗ ಆಕೆ ಆರೋಪಿ ಕೋಲಿನಿಂದ ಆಕೆಗೆ ಹೊಡೆದಿದ್ದಾಗಿ ತಿಳಿಸಿದ್ದಾಗಿ ಚಾಸಾ.13 ರವರು ನಿಮಗೆ ತಿಳಿಸಿದ್ದಾರೆ ಎಂದು ಮತ್ತು ಆರೋಪಿಗೆ ಮದ್ಯಪಾನ ಮಾಡುವ ಅಭ್ಯಾಸದ ಜೊತೆಗೆ ಬೇರೆ ಹೆಂಗಸರ ಸಹವಾಸ ಸಹ ಇದ್ದುದ್ದಾಗಿ ತಿಳಿಸಿ ಆ ದಿನ ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿ.

**(ಪಾಟೀ ಸವಾಲು: ಈ ದಿನ ಆರೋಪಿ ಪರ ವಕೀಲರು ಸಿ ಆರ್ ಪಿ ಸಿ ಕಲಂ 231(2) ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದ ಮೇರೆಗೆ ಚಾಸಾ.13 ರವರ ಮುಖ್ಯ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್